5) ಕಡೂರು ತಾಲ್ಲೂಕಿನ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಫೆಬ್ರವರಿ 2001ನೇ ಸುತ್ತಿಗೆ ಸಿಂಪಡಿಸಲು 5000 ಕೆ.ಜಿ. ಮೆಲಾಧಿಯಾನ್ ಕೀಟನಾಶಕಪುಡಿಯನ್ನು ಸರಬರಾಜು ಮಾಡಲಾಗಿದೆ.

6) ರೋಗವಾಹಕ ಸೊಳ್ಳೆ ಉತ್ಪತ್ತಿಯ ತಾಣಗಳನ್ನು ನಿಯಂತ್ರಿಸಲು ಹಲವು ಸೂಕ್ತವಾದ ನೀರುನಿಂತ ಸ್ಥಳಗಳಲ್ಲಿ, ಗ್ಯಾಂಬುಸಿಯ ಮತ್ತು ಗಪ್ಪಿ ಎಂಬ ಲಾರ್ವಾಹಾರಿ ಮೀನುಗಳನ್ನು ಬಿಡಲಾಗಿದೆ.

7) ಮಲೇರಿಯ ರೋಗ ತಡೆಗಟ್ಟುವ ಬಗ್ಗೆ ವ್ಯಾಪಕವಾದ ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ.

ಆ. ಚಿಕ್ಕಮಗಳೂರು ಜಿಲ್ಲೆಗೆ 1999-2000 ಹಾಗೂ 2000-01ನೇ ಸಾಲಿನಲ್ಲಿ ಮಲೇರಿಯ ನಿಯಂತ್ರಣ ಕಾರ್ಯಕ್ರಮಕ್ಕೆ ಬಿಡುಗಡೆಯಾಗಿರುವ ಹಣ ಈ ಕೆಳಕಂಡಂತಿದೆ.

	1999-2000	2000-2001
ವೇತನಕ್ಕಾಗಿ:	ರೂ. 22,99,000.00	ರೂ. 22,24,000.00
ವೇತನೇತರ:	ರೂ. 1,68,000.00	ರೂ. 2,47,000.00
ಒಟ್ಟು :	ರೂ. 24,67,000.00	ರೂ. 24,71,000.00

ರಾಷ್ಟ್ರೀಯ ಮಲೇರಿಯ ವಿರೋಧ ಕಾರ್ಯಕ್ರಮದಡಿಯಲ್ಲಿ ಬೇಕಾದ ಮಲೇರಿಯ ನಿರೋಧಕ ಔಷಧಿಗಳನ್ನು ಕೇಂದ್ರ ಸರ್ಕಾರವು ತನ್ನ ಪಾಲಿನ ಅನುದಾನದ ರೂಪದಲ್ಲಿ ರಾಜ್ಯಕ್ಕೆ ಸರಬರಾಜು ಮಾಡುತ್ತದೆ. ಆದುದರಿಂದ ರಾಜ್ಯವು ಸಾಮಾನ್ಯವಾಗಿ ಈ ಔಷಧಿಗಳನ್ನು ಖರೀದಿಸುವುದಿಲ್ಲ. ಕೇಂದ್ರ ಸರ್ಕಾರದಿಂದ ಸರಬರಾಜಾದ ಔಷಧಿಗಳನ್ನು ಕ್ಲೋರೋಕ್ವಿನ್ ಮಾತ್ರೆಗಳು 15, 12,000

ಪೈ ಮಾಕ್ವಿನ್ ಮಾತ್ರೆಗಳು 85,000 ಸಲ್ಫಾಲಿನ್/ಪೈರಿಮೀಥಮೀನ್ ಮಾತ್ರೆಗಳು 1000 ಅಟ್ಟೀಥರ್ ಚುಚ್ಚುಮದ್ದುಗಳು 180 ಅಂಪ್ಯೂಲ್.

ಕಡೂರು ಆಸ್ಪತ್ರೆಯ ಕಾಮಗಾರಿಯ ಬಗ್ಗೆ.

ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು): ಮಾನ್ಯ ಆರೋಗ್ಯ ಮತ್ತು ಕುಟು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಡೂರು ಪಟ್ಟಣದಲ್ಲಿ ವಿಶ್ವ ಬ್ಯಾಂಕ್ ನೆರವು ಯೋಜನೆ ಅಡಿಂ ನಿರ್ಮಿಸುತ್ತಿರುವ ಆಸ್ಪತ್ರೆಯ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವ ಸರಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಹಾಗೂ ಸಂಬಂಧಪಟ್ಟ ಗುತ್ತಿಗೆದ ಮೇಲೆ ಕ್ರಮ ಕೈಕೊಳ್ಳದಿರಲು ಕಾರಣಗಳೇನು?

ಇ. ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚವೆಷ್ಟು? ಇದುವರೆವಿಗೂ ಂ ಹಣ ಬಿಡುಗಡೆಯಾಗಿ ಗುತ್ತಿಗೆದಾರರಿಗೆ ನೀಡಲಾಗಿದೆ? ವಿವರವಾದ ಮಾಹಿತಿಯ ನೀಡುವುದು?

ಡಾ॥ ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ. ಬಂದಿದೆ.

ಆ. ಆಸ್ಪತ್ರೆ ವಿಸ್ತರಣೆಗೆ ಮೀಸಲಿಟ್ಟಿರುವ ನಿವೇಶನದಲ್ಲಿ ವಿದ್ಯುತ್ ತಂತಿ, ನಿ ಹಾಗೂ ಒಳಚರಂಡಿ ಪೈಪುಗಳು ಹಾದು ಹೋಗಿದ್ದು ಇವುಗಳನ್ನು ಸ್ಥಳಾಂ ಕಾಮಗಾರಿ ಪ್ರಾರಂಭಿಸಲು ಸ್ವಲ್ಪ ವಿಳಂಬವಾಗಿರುತ್ತದೆ. ಕಾಮಗಾರಿಗಳ ಪ್ರಗತಿಂ ಸ್ವಲ್ಪ ವಿಳಂಬವಾಗಿದ್ದು ಈ ಬಗ್ಗೆ ಗುತ್ತಿಗೆದಾರರಿಗೆ ನೋಟೀಸುಗಳನ್ನು ನೀಡಲಾ ಗುತ್ತಿಗೆದಾರರು ಮುಂದೆ ಕಾಮಗಾರಿಯಲ್ಲಿ ಸೂಕ್ತ ಪ್ರಗತಿ ಸಾಧಿಸದಿದ್ದಲ್ಲಿ ಗ ಕರಾರಿನನ್ವಯ ದಂಡವಿಧಿಸಿ ಗುತ್ತಿಗೆಯನ್ನು ಮುಕ್ತಾಯಗೊಳಿಸಿ ಬಾಕಿ ಕೆಲಸ ಮರು ಟೆಂಡರ್ ಕರೆದು ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಇ. ಈ ಆಸ್ಪತ್ರೆಯ ಅಭಿವೃದ್ಧಿ ಕಾಮಗಾರಿಗೆ ರೂ. 147.00 ಲಕ್ಷಗಳು ಅಂದ ಮಂಜೂರಾಗಿದ್ದು, ಇದುವರೆವಿಗೆ ರೂ. 67.35 ಲಕ್ಷಗಳು ವೆಚ್ಚವಾಗಿರುತ್ತದೆ.

ಕಲಬುರ್ಗಿ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರು ನಾಮಕರಣ.

182(424)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಉನ್ನತ ಶಿಕ್ಷಣ ಸಚಿ